ದಿನಾಂಕ : 14.11.2022

ಓ.ಎಸ್ ನಂ.495/2012 ರಲ್ಲಿ
ಪಿ.ಡಬ್ಲ್ಯೂ-1(ಹರೀಶ್ ಪೂನಂ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 5 ಮತ್ತು 6ನೇ ಪ್ರತಿವಾದಿಗಳ ಪರ ಶ್ರೀ ಎಂ.ಸಿ.ಡಿ ವಕೀಲರಿಂದಃ

ನಾನು ಪಿ.ಯು.ಸಿ ವರೆಗೆ ಓದಿದ್ದೇನೆ. ನಾನು ಈ ದಾವೆಯ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿದ್ದು ಎನ್ನುವುದು ನನಗೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತಿನ ವಿಸ್ತೀರ್ಣ ಹಾಗೂ ಸರ್ವೇ ನಂಬರ್ ಗೊತ್ತಿದೆ. ದಾವಾ ಸ್ವತ್ತಿನ ಉತ್ತರಕ್ಕೆ ಸರ್ಕಾರಿ ಜಮೀನು ಬರುತ್ತದೆ. ನನಗೆ ದಾವಾ ಸ್ವತ್ತಿನ ಚಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ. ದಾವಾ ಸ್ವತ್ತನ್ನು ಪದ್ಮಾವತಿರವರು ಚಿಕ್ಕಮಾದಯ್ಯರವರಿಂದ ದಿನಾಂಕ 12.07.1987 ರಂದು ಖರೀದಿಸಿರುತ್ತಾರೆ. ಆಕೆ ಕೇವಲ ಚಿಕ್ಕಮಾದಯ್ಯರವರಿಂದ ಖರೀದಿಸಿದರೇ ಅಥವಾ ಚಿಕ್ಕಮಾದಯ್ಯನೊಂದಿಗೆ ಇತರರೊಂದಿಗೆ ಖರೀದಿಸಿದರೇ ಎನ್ನುವ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಸದರಿ ಖರೀದಿ ಪತ್ರವನ್ನು ನೋಡಿಯೇ ಹೇಳುತ್ತಿದ್ದೇನೆ. ನನ್ನ ತಂದೆ ದಿನಾಂಕ 7ನೇ ತಾರೀಖು 11ನೇ ತಿಂಗಳು ಪೌತಿಯಾಗಿದ್ದು, ಪೌತಿಯಾದ ವರ್ಷ ಹೇಳಲು ನನಗೆ ಗೊತ್ತಾಗುವುದಿಲ್ಲ. ನನ್ನ ತಂದೆ ಪೌತಿಯಾಗುವ ಮೊದಲು ನಾನು, ನನ್ನ ತಂದೆ, ನನ್ನ ಅಣ್ಣಂದಿರು ಭೂ ಅಭಿವೃದ್ಧಿ ಮಾಡುವ ವ್ಯವಹಾರ ಮಾಡುತ್ತಿದ್ದೆವು. ಈ ವಿಚಾರವನ್ನು ನನ್ನ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎನ್ನುವುದು ನಿಜ. ನನ್ನ ತಂದೆ ಪೌತಿಯಾದ ನಂತರ ನನ್ನ ಅಣ್ಣ ಸದರಿ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಈ ವಿಚಾರವನ್ನು ಸಹ ನನ್ನ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎನ್ನುವುದು ನಿಜ. ನನ್ನ ತಂದೆ ಪೌತಿಯಾಗುವ ಮೊದಲು ಆರೋಗ್ಯವಾಗಿದ್ದರು ಎನ್ನುವುದು ನಿಜ. ನನ್ನ ತಂದೆ ಪೌತಿಯಾಗುವ ಪೂರ್ವದಲ್ಲಿ ಅವರು ಖರೀದಿಸಿದ ಸ್ವತ್ತುಗಳ

ದಿನಾಂಕ : 14.11.2022 ಓ.ಎಸ್ ನಂ.495/2012 ರಲ್ಲಿ
ಪಿ.ಡಬ್ಲ್ಯೂ-1(ಹರೀಶ್ ಪೂನಂ)

ವ್ಯವಹಾರಗಳನ್ನು ಅವರು ಮಾತ್ರ ನೋಡಿಕೊಳ್ಳುತ್ತಿದ್ದರು ಎನ್ನುವುದು ನಿಜ. ನಾನು ನನ್ನ ಹೆಸರಿನಲ್ಲಿ ಸ್ವತ್ತನ್ನು ಖರೀದಿಸುವ ವ್ಯವಹಾರವನ್ನು ಮಾಡಿದ್ದೇನೆ. ಸಾಮಾನ್ಯವಾಗಿ ಒಂದು ಸ್ವತ್ತನ್ನು ಖರೀದಿಸುವಾಗ ಅದಕ್ಕೆ ಮೊದಲು ಒಂದು ಕರಾರು ಪತ್ರವಾಗಿರುತ್ತದೆ ಎನ್ನುವುದು ನಿಜ.

ನಾನು ಹಾಜರುಪಡಿಸಿರುವ ನಿಪಿ-1ರ ಪೂರ್ವದಲ್ಲಿ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕರಾರು ಪತ್ರ ಆಗಿರಲಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ-1ರ ಪೂರ್ವದಲ್ಲಿ ಮಾತುಕತೆಯಾಗಿತ್ತೇ? ಹಾಗೂ ಮುಂಗಡ ಹಣ ಪಾವತಿಸಲಾಗಿತ್ತೇ? ಎನ್ನುವ ಬಗ್ಗೆ ನಿಮಗೆ ಗೊತ್ತೇ ಎಂದರೆ ಸಾಕ್ಷಿಯು ಮಾತುಕತೆಯಾದದ್ದು ನನಗೆ ಗೊತ್ತು ಎಂದು ನುಡಿಯುತ್ತಾರೆ. ಯಾವ ತಾರೀಖಿನಂದು ಮಾತುಕತೆಯಾಗಿತ್ತು ಹಾಗೂ ಯಾವ ತಾರೀಖಿನಂದು ಮುಂಗಡ ಹಣ ಪಾವತಿಸಲಾಗಿತ್ತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸಂಬಂಧ ನಿಪಿ-1 ಆಗುವ ಪೂರ್ವದಲ್ಲಿ ಮಾತುಕತೆಯಾಗಿತ್ತು ಎನ್ನುವ ಕುರಿತು ಹಾಗೂ ಮುಂಗಡ ಹಣ ಪಾವತಿಸಲಾಗಿತ್ತು ಎನ್ನುವ ಕುರಿತು ನನ್ನ ಪ್ರಮಾಣಪತ್ರದಲ್ಲಾಗಲೀ ಅಥವಾ ನಾನು ಹಾಜರುಪಡಿಸಿರುವ ನಿಪಿ-1ರಲ್ಲಾಗಲೀ ಒಕ್ಕಣೆ ಇಲ್ಲ ಎನ್ನುವುದು ನಿಜ. ನಿಪಿ-1 ಆಗುವ ಸಮಯದಲ್ಲಿ ನೀವು ಖುದ್ದಾಗಿ ಹಾಜರಿರಲಿಲ್ಲ? ಎಂದರೆ ಸಾಕ್ಷಿಯು ಮೊದಲು ಈ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿದಿದ್ದು ನಂತರ ಮುಂದುವರೆದು ನಾನು ಹಾಜರಿದ್ದೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಾನು ಹಾಜರಿದ್ದೆ ಎನ್ನುವ ವಿಚಾರವನ್ನು ನನ್ನ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎನ್ನುವುದು ನಿಜ. ಆ ಸಮಯದಲ್ಲಿ ನಾನು ಹಾಜರಿದ್ದೆ ಎಂದು ಹೇಳುತ್ತಿದ್ದು, ಸದರಿ ಕ್ರಯಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಲು ನನಗೆ ತೊಂದರೆ ಇರಲಿಲ್ಲ

ಎನ್ನುವುದು ನಿಜ. ಸದರಿ ಕ್ರಯಪತ್ರಕ್ಕೆ ಸಾಕ್ಷಿದಾರರು ಯಾರು ಹಾಗೂ ಅವರು ಯಾವ ಊರಿನವರು ಎಂದು ಹೇಳಲು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಯಾವ ಭಾಷೆಯಲ್ಲಿ ಸಹಿ ಮಾಡಿದ್ದಾರೆಂದು ನನಗೆ ನೆನಪಿಲ್ಲ. ಸದರಿ ದಾಖಲೆಯ ಒಕ್ಕಣೆಗಳನ್ನು ಯಾರು ಹೇಳಿ ಬರೆಸಿದರು ಎಂದು ನನಗೆ ಗೊತ್ತಿಲ್ಲ.

ಆ ದಿನ ನನ್ನ ತಂದೆಗೆ 1 ರಿಂದ 4ನೇ ಪ್ರತಿವಾದಿಗಳು ಏನು ವಿಷಯವನ್ನು ತಿಳಿಸಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುವುದು ನಿಜ. 1 ರಿಂದ 4ನೇ ಪ್ರತಿವಾದಿಗಳ ಪರ ಸಲ್ಲಿಸಲಾದ ಲಿಖಿತ ಹೇಳಿಕೆಯಲ್ಲಿ 1ನೇ ಪ್ರತಿವಾದಿಯ ಸಹಿಯನ್ನು ನಾನು ಗುರುತಿಸಬಲ್ಲೆ. ಸಾಕ್ಷಿಯು ಸದರಿ ಲಿಖಿತ ಹೇಳಿಕೆಯನ್ನು ನೋಡಿ ಅದರಲ್ಲಿನ 1ನೇ ಪ್ರತಿವಾದಿಯ ಸಹಿಯನ್ನು ಗುರುತಿಸುತ್ತಾರೆ. ಉಳಿದ ಪ್ರತಿವಾದಿಗಳ ಸಹಿಗಳನ್ನು ಗುರುತಿಸಲು ಸಾಧ್ಯವಿಲ್ಲ. ಈಗ ನನಗೆ ತೋರಿಸಲಾದ ದಾಖಲೆಯಲ್ಲಿ 1ನೇ ಪ್ರತಿವಾದಿಯ ಸಹಿಗಳನ್ನು ಮಾತ್ರ ನಾನು ಗುರುತಿಸಬಲ್ಲೆ. ಸಾಕ್ಷಿಗೆ 5 ಮತ್ತು 6ನೇ ಪ್ರತಿವಾದಿಗಳ ಪರ ವಕೀಲರು ತೋರಿಸಿದ ದಾಖಲೆಯು ದಿನಾಂಕ 07.03.2007 ರ ಸಾಮಾನ್ಯ ಮೊಕ್ತಾರು ನಾಮೆಯಾಗಿದ್ದು, ಅದರಲ್ಲಿ ಸಾಕ್ಷಿಯು 1ನೇ ಪ್ರತಿವಾದಿಯ ಸಹಿಗಳು ಎಂದು ಸಹಿಗಳನ್ನು ಗುರುತಿಸಿದ ಕಾರಣ ಸದರಿ ದಾಖಲೆಯನ್ನು **ನಿಡಿ-1** ಎಂದು ಹಾಗೂ ಸದರಿ ದಾಖಲೆಯಲ್ಲಿ 1ನೇ ಪ್ರತಿವಾದಿಯ ಸಹಿಗಳೆಂದು ಸಾಕ್ಷಿಯು ಗುರುತಿಸಿದ 4 ಸಹಿಗಳನ್ನು ಕ್ರಮವಾಗಿ ನಿಡಿ-1(ಎ) ಯಿಂದ ನಿಡಿ-1(ಡಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿ 1ನೇ ಪ್ರತಿವಾದಿಯ

ಸಹಿಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಸಾಕ್ಷಿಗೆ 5 ಮತ್ತು 6 ನೇ ಪ್ರತಿವಾದಿಗಳ ಪರ ವಕೀಲರು ತೋರಿಸಿದ ದಾಖಲೆಯು ದಿನಾಂಕ 10.09.2004 ರ ಕ್ರಯದ ಕರಾರು ಪತ್ರವಾಗಿದ್ದು, ಅದರಲ್ಲಿ ಸಾಕ್ಷಿಯು 1 ನೇ ಪ್ರತಿವಾದಿಯ ಸಹಿಗಳು ಎಂದು ಸಹಿಗಳನ್ನು ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ-2 ಎಂದು ಹಾಗೂ ಸದರಿ ದಾಖಲೆಯಲ್ಲಿ 1 ನೇ ಪ್ರತಿವಾದಿಯ ಸಹಿಗಳೆಂದು ಸಾಕ್ಷಿಯು ಗುರುತಿಸಿದ 2 ಸಹಿಗಳನ್ನು ಕ್ರಮವಾಗಿ ನಿಡಿ-2(ಎ) ಮತ್ತು ನಿಡಿ-2(ಬಿ) ಎಂದು ಗುರುತಿಸಲಾಯಿತು.

ನಿಡಿ-1 ರಂತೆ 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಸಾಮಾನ್ಯ ಮೊಕ್ತಾರು ನಾಮೆಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ದಾಖಲೆಯಂತೆ ಆಗಿದೆ, ಆದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-2 ರಂತೆ 1 ನೇ ಪ್ರತಿವಾದಿಯ ಹೆಸರಿನಿಂದ 5 ನೇ ಪ್ರತಿವಾದಿಯ ಹೆಸರಿಗೆ ಕ್ರಯದ ಕರಾರು ಪತ್ರವಾಗಿದೆ ಎಂದರೆ ಸಾಕ್ಷಿಯು ಸದರಿ ದಾಖಲೆಯಂತೆ ಆಗಿದೆ, ಆದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಹಾಜರುಪಡಿಸಿರುವ ದಾಖಲೆಗಳ ಕುರಿತು ನನಗೆ ಗೊತ್ತಿದೆ. ನಿಡಿ-1 ಜಿ.ಪಿ.ಎ ಆಧಾರದ ಮೇಲೆ 5 ನೇ ಪ್ರತಿವಾದಿ 6 ನೇ ಪ್ರತಿವಾದಿಯ ಹೆಸರಿಗೆ ನಿಪಿ-4 ರಂತೆ ದಿನಾಂಕ 27.12.2010 ರಂದು ಕ್ರಯಪತ್ರ ಮಾಡಿಕೊಟ್ಟಿದ್ದಾರೆಂದು ಸಾಕ್ಷಿಗೆ ನಿಪಿ-4 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಅದನ್ನು ಸೃಷ್ಟಿಸಲಾಗಿದೆ ಎಂದು ನುಡಿಯುತ್ತಾರೆ. ನಿಡಿ-1, ನಿಡಿ-2 ಹಾಗೂ ನಿಪಿ-4 ರ ದಾಖಲೆಗಳ ಕುರಿತು 1 ನೇ ಪ್ರತಿವಾದಿ ನನ್ನ ತಂದೆಗೆ ತಿಳಿಸಿದ್ದರು ಎನ್ನುವುದು

ಸರಿಯಲ್ಲ. ದಾವಾ ಸ್ವತ್ತು ನಮ್ಮ ಇತರ ಸ್ವತ್ತುಗಳ ಅಕ್ಕಪಕ್ಕದಲ್ಲಿದೆ ಎನ್ನುವುದು ನಿಜ. ನಮಗೆ ದಾವಾ ಸ್ವತ್ತು ಅತ್ಯವಶ್ಯಕವಾಗಿ ಬೇಕಿತ್ತು ಎನ್ನುವುದು ನಿಜ. ದಾವಾ ಸ್ವತ್ತು ನಮಗೆ ಅತ್ಯವಶ್ಯಕವಾಗಿ ಬೇಕಾಗಿದ್ದ ಕಾರಣ ನಿಡಿ-1, ನಿಡಿ-2 ಹಾಗೂ ನಿಪಿ-4 ರಂತೆ ದಾಖಲೆಗಳು ಇದ್ದರೂ ಸಹ ನಿಪಿ-1 ದಾಖಲೆಯನ್ನು ನಾವು ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 5 ಮತ್ತು 6 ನೇ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.